# ಬರುತಿದೆ ಯುಗಾದಿ ನಮ್ಮದು ಯಾವ ಹಾದಿ



‘ಕೆಂದಳಿರಿನ ಬೆರಳ ಹಿಡಿದು ಬರುತಿದೆ ಯುಗಾದಿ’ ಎಂದು ಯುಗಾದಿಯನ್ನು ಬಣ್ಣಿಸುವ ಕವಿ, ‘ತೆರೆಯಿರಿ ಮನೆಯ ಕದಗಳನು, ಎದೆಯ ಕದಗಳನೂ’ ಎನ್ನುತ್ತಾರೆ. ಹೌದು, ಇದು ಕದಗಳನ್ನು ತೆರೆಯುವ ಸಮಯ. ಬಹಿರಂಗದ ಬೆಳಕನ್ನು ಅಂತರಂಗಕ್ಕೂ ಬರಮಾಡಿಕೊಳ್ಳುವ ಸಮಯ. ಪ್ರಕೃತಿಯ ಚೆಲುವನ್ನು ನಮ್ಮ ಉಲ್ಲಾಸವನ್ನಾಗಿಸಿಕೊಳ್ಳುವ ಸಮಯ. ಯುಗಾದಿಯೆಂದರೆ ಹೊಸತನಕ್ಕೆ ತೆರೆದುಕೊಳ್ಳುವುದು. ಹೊಸತಿಗಾಗಿ ಹಂಬಲಿಸುವುದು.

ಹೊಸತಿನ ಹಂಬಲವನ್ನು ನಾವು ಪ್ರಕೃತಿಯಿಂದ ಕಲಿಯಬೇಕು. ಪ್ರಕೃತಿಯಂತೆ ಮೈಭಾರವನ್ನೆಲ್ಲ ಕಳೆದುಕೊಂಡು ಮತ್ತೆ ಮೈತುಂಬಿಕೊಳ್ಳುವ ಜಾದೂ ನಮಗೆ ಗೊತ್ತಿಲ್ಲ. ಆದರೆ, ಮನಸ್ಸಿನ ಉಲ್ಲಾಸವನ್ನು ನವೀಕರಿಸಿಕೊಳ್ಳುವುದು ನಮ್ಮ ಕೈಯಲ್ಲೇ ಇದೆ. ಪ್ರಕೃತಿಯ ಹೊಸ ಹರಯ–ಹುಮ್ಮಸ್ಸಿಗೆ ಸ್ಪಂದಿಸುವ ಮೂಲಕ ನಮ್ಮ ದಣಿವಾರಿಸಿಕೊಳ್ಳುವುದು ಸಾಧ್ಯವಿದೆ. ಯುಗಾದಿ ಹೇಳಿಕೊಡುವುದು ಇದನ್ನೇ, ಪ್ರಕೃತಿಯೊಂದಿಗಿನ ಸಖ್ಯದಲ್ಲಿ ನಮ್ಮ ಬದುಕಿನ ಚೆಲುವನ್ನು ಹೆಚ್ಚಿಸಿಕೊಳ್ಳುವುದನ್ನು.

ಯುಗಾದಿಯೊಂದಿಗೆ ಅಡಿಯಿಡುತ್ತಿರುವ ‘ಶಾರ್ವರಿ’ ಸಂವತ್ಸರ ಕೆಂದಳಿರ ಬೆರಳನ್ನೇನೋ ಹಿಡಿದಿದೆ. ಆದರೆ ತಳಿರಿನ ಕೆಂಪು ರಕ್ತವರ್ಣವೂ ಆಗಿದೆ. ಮಾರಣಾಂತಿಕ ವೈರಸ್ ತಂದೊಡ್ಡಿರುವ ಆತಂಕದಲ್ಲಿ ಮನೆಯ ಕದವನ್ನೂ ಎದೆಯ ಕದವನ್ನೂ ಮುಕ್ತವಾಗಿ ತೆಗೆಯುವುದು ಕಷ್ಟ ಎನ್ನುವಂತಿರುವ ಸಂದರ್ಭ ಇಂದಿನದು. ಒಂದೆಡೆ ವೈರಸ್‌ನ ಆತಂಕ, ಇನ್ನೊಂದೆಡೆ ಆರ್ಥಿಕ ಹಿಂಜರಿತ. ಈ ಅಡೆತಡೆಗಳ ನಡುವೆಯೂ ಯುಗಾದಿ ಬಂದಿದೆ, ನಮ್ಮ ಮುಂದಿದೆ. ಯುಗಾದಿಪುರುಷ ಪಿಸುನುಡಿಯುತ್ತಾನೆ: ‘ಯುಗಾದಿ ಬೇವು–ಬೆಲ್ಲಗಳ ರೂಪಕದ ಹಬ್ಬ. ಕಹಿಗೆ ಅಳುಕದೆ ನಡೆದರಷ್ಟೇ ಬೆಲ್ಲದ ಸಿಹಿ.’ ಹೌದಲ್ಲವೇ, ಈ ಕ್ಷಣದ ಹಿಂಜರಿತಗಳನ್ನು ಮೀರಿ ಮುನ್ನಡೆಯಲು ಯುಗಾದಿಯೇ ನಮಗೆ ಪ್ರೇರಣೆ. ಆ ನಂಬಿಕೆಯಲ್ಲಿ ಒಮ್ಮೆ ಕನ್ನಡ ಸಾಹಿತ್ಯ ಪರಂಪರೆಯೊಳಗೆ ಇಣುಕಿ ನೋಡಿದರೆ, ಅಲ್ಲಿ ನಮ್ಮನ್ನೂ ನಮ್ಮ ಬದುಕನ್ನೂ ಕೈಹಿಡಿದು ನಡೆಸುವಂತಹ ಸ್ಫೂರ್ತಿ ಗೀತಗಳು ಸಾಕಷ್ಟಿವೆ. ಅಂತಹ ಕೆಲವು ಗೀತಗಳ ತುಣುಕುಗಳ ಗುಚ್ಛ ಇಲ್ಲಿದೆ. ಈ ಸಾಲುಗಳು ಯುಗಾದಿಯ ಸಂಭ್ರಮವನ್ನಷ್ಟೇ ಹೇಳುತ್ತಿಲ್ಲ, ನಮ್ಮ ಬದುಕಿನ ಗತಿಯನ್ನೂ ಸೂಚಿಸುವಂತಿವೆ.

ಕಮ್ಮನೆ ಬಾಣಕ್ಕೆ ಸೋತು
ಜುಮ್ಮನೆ ಮಾಮರವು ಹೂತು
ಕಾಮಗಾಗಿ ಕಾದಿದೆ.
ಸುಗ್ಗಿ ಸುಗ್ಗಿ ಸುಗ್ಗಿ ಎಂದು
ಹಿಗ್ಗಿ ಗಿಳಿಯ ಸಾಲು ಸಾಲು
ತೋರಣದೊಲು ಕೋದಿದೆ.

ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ.
ಹೊಸವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ
ನಮ್ಮನಷ್ಟೆ ಮರೆತಿದೆ!

-ದ.ರಾ. ಬೇಂದ್ರೆ